

## ಹೊಸ ಸಂಸತ್ ಭವನದ ಲೋಕಾರ್ಪಣೆ

**ಹೊಸ** ಸಂಸತ್ ಭವನದ ಉದ್ಘಾಟನೆ ಹಾಗೂ ನೂತನ ಭವನದಲ್ಲಿ ಲೋಕಸಭೆ–ರಾಜ್ಯಸಭೆ ಕಲಾಪಗಳು ನಡೆಯುವಂತಾದುದು ಆಡಳಿತಾತ್ಮಕ ದೃಷ್ಟಿಯಿಂದ 2023ರ ಗಮನಸೆಳೆಯುವ ಸಂಗತಿಗಳಲ್ಲೊಂದು. ಮೇ 28ರಂದು ಪ್ರಧಾನಿ ನರೇಂದ್ರ ಮೋದಿ ನೂತನ ಸಂಸತ್ ಭವನವನ್ನು ಉದ್ಘಾಟಿಸಿದರು. ಸೆಪ್ಟೆಂಬರ್ 19ರಂದು ಸದನ ನಡೆಯುವುದರೊಂದಿಗೆ ಪ್ರಜಾಪ್ರತಿನಿಧಿಗಳ ಕಲಾಪಕ್ಕೆ ನೂತನ ಕಟ್ಟಡ ಸಾಕ್ಷಿಯಾಯಿತು. ಇದರೊಂದಿಗೆ 93 ವರ್ಷಗಳ ಹಳೆಯ ಕಟ್ಟಡ ನೇಪಥ್ಯಕ್ಕೆ ಸರಿಯಿತು.

₹861.90 ಕೋಟಿ ರೂಪಾಯಿ ವೆಚ್ಚದ, 65,000 ಚ.ಮೀ. ವಿಸ್ತೀರ್ಣದ ಕಟ್ಟಡ ನಿರ್ಮಾಣಕ್ಕೆ 2020ರ ಸೆಪ್ಟೆಂಬರ್‌ನಲ್ಲಿ ಚಾಲನೆ ದೊರೆತರೂ, ಕಟ್ಟಡ ನಿರ್ಮಾಣ ಪ್ರಕ್ರಿಯೆ ಆರಂಭಗೊಂಡಿದ್ದು 2021ರ ಜನವರಿಯಲ್ಲಿ.

ಸದನದ ಸದಸ್ಯರು ಹಾಗೂ ಅವರ ಸಿಬ್ಬಂದಿಗೆ ಹಳೆಯ ಕಟ್ಟಡದಲ್ಲಿ ಸ್ಥಳಾವಕಾಶ ಸಾಕಾಗುತ್ತಿಲ್ಲ ಎನ್ನುವ ಕಾರಣಕ್ಕಾಗಿ ಹೊಸ ಕಟ್ಟಡವನ್ನು ನಿರ್ಮಿಸಲಾಗಿದೆ. ಭೂಕಂಪ ನಿರೋಧಕ ತಂತ್ರಜ್ಞಾನವನ್ನು ಹೊಂದಿರುವ ಈ ಕಟ್ಟಡ ಆಧುನಿಕ ತಂತ್ರಜ್ಞಾನದೊಂದಿಗೆ ದೇಶದ ಪಾರಂಪರಿಕ ಹೆಮ್ಮೆಯನ್ನೂ ತನ್ನ ವಿನ್ಯಾಸದಲ್ಲಿ ಒಳಗೊಂಡಿದೆ.

ನೂತನ ಸಂಸತ್ ಭವನ ಕಾರ್ಯಾರಂಭ ಮಾಡಿದ್ದರೂ, ಹಳೆಯ ಕಟ್ಟಡವನ್ನು ಹಾಗೆಯೇ ಉಳಿಸಿಕೊಳ್ಳಲು ಸರ್ಕಾರ ಉದ್ದೇಶಿಸಿದೆ. ಹಳೆಯ ಕಟ್ಟಡ ದೇಶದ ಪಾರಂಪರಿಕ ಕಟ್ಟಡಗಳ ಸಾಲಿಗೆ ಸೇರ್ಪಡೆಯಾಗಿದೆ.

## ಒಡಹುಟ್ಟಿದವರ ಚಂದಯಾನ

**ಚಂದ್ರಯಾನದಂತೆಯೇ** ಚದುರಂಗದ ಮಣೆಯಲ್ಲಿ ತಮಿಳುನಾಡಿನ ಒಡಹುಟ್ಟುಗಳು ಸಾಧಿಸಿದ ಅಪೂರ್ವ ಯಶಸ್ಸಿನ ಚಂದಯಾನವೂ ವಿಶೇಷವಾದುದು. ವೈಶಾಲಿ ಹಾಗೂ ಪ್ರಜ್ಞಾನಂದ ತಮಿಳುನಾಡಿನ ಯುವ ಚೆಸ್‌ಪ್ರತಿಭೆಗಳು. ಅಕ್ಕ–ತಮ್ಮ ಎನ್ನುವುದು ಈ ಜೋಡಿಯ ಮತ್ತೊಂದು ವಿಶೇಷ. ಇಬ್ಬರೂ ಗ್ರ್ಯಾಂಡ್ ಮಾಸ್ಟರ್ ಕ್ಲಬ್ ಸೇರುವುದರೊಂದಿಗೆ, ಈ ಸಾಧನೆ ಮಾಡಿದ ವಿಶ್ವದ ಮೊದಲ ಸಹೋದರಿ–ಸಹೋದರ ಎನ್ನುವ ಸಾಧನೆ ಇವರದ್ದಾಗಿದೆ.

ಪ್ರಗ್ಗು ಅಲಿಯಾಸ್ ಪ್ರಜ್ಞಾನಂದ 2018ರಲ್ಲಿ ಗ್ರ್ಯಾಂಡ್ ಮಾಸ್ಟರ್ ಪಟ್ಟಕ್ಕೇರಿದ್ದ; ಆ ಮೂಲಕ ವಿಶ್ವದ ಎರಡನೇ ಅತಿ ಕಿರಿಯ ಗ್ರ್ಯಾಂಡ್ ಮಾಸ್ಟರ್ ಎನ್ನಿಸಿಕೊಂಡಿದ್ದ. ಈ ವರ್ಷ ಜಿ.ಎಂ. ಪಟ್ಟ ಅಕ್ಕನಿಗೆ ದಕ್ಕುವ ಮೂಲಕ, ಒಂದೇ ಮನೆಯಲ್ಲಿ ಇಬ್ಬರು ಗ್ರ್ಯಾಂಡ್ ಮಾಸ್ಟರ್‌ಗಳು ರೂಪುಗೊಂಡಂತಾಯಿತು.



ಚದುರಂಗದ ಜಾಣ ಜಾಣೆಯರ ಸಾಧನೆ ಇಷ್ಟೇ ಅಲ್ಲ. ‘ಫಿಡೆ ವಿಶ್ವಕಪ್ 2023’ರ ಚಾಂಪಿಯನ್‌ಷಿಪ್‌ನಲ್ಲಿ ಪ್ರಗ್ಗು ಫೈನಲ್ ಪ್ರವೇಶಿಸಿದ್ದರು. ಹಿಕಾರು ನಕಾಮುರಾ, ಫ್ಯಾಬಿಯಾನೊ ಕರುವಾನಾ ಹಾಗೂ ಅರ್ಜುನ್ ಇರಿಗೇಶಿಯರಂಥ ಜಗಜ್ಜಾಣರನ್ನು ಮಣಿಸಿದ ಪ್ರಗ್ಗು, ಫೈನಲ್‌ನಲ್ಲಿ ಮ್ಯಾಗ್ನಸ್ ಕಾರ್ಲ್‌ಸನ್ ಎದುರು ಮಣಿದರೂ, ವಿಶ್ವ ಚಾಂಪಿಯನ್‌ಗೆ ಸವಾಲೆಸೆಯುವ ಹುದ್ದರಿಯನ್ನು ನಿರ್ಣಯಿಸುವ ‘ಕ್ಯಾಂಡಿಡೇಟ್ಸ್ ಟೂರ್ನಿ’ಗೆ ಪ್ರವೇಶ ಪಡೆದುದು ಬಹು ದೊಡ್ಡ ಸಾಧನೆಯೇ ಸರಿ. ‘ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿ’ಯಲ್ಲಿ ಪ್ರಶಸ್ತಿ ಗೆಲ್ಲುವ ಮೂಲಕ ವೈಶಾಲಿಯೂ ಕ್ಯಾಂಡಿಡೇಟ್ಸ್ ಅಂಗಳಕ್ಕೆ ಟಿಕೆಟ್ ಪಡೆದಿದ್ದಾಳೆ.




### ಸಾಮಾಜಿಕ ಪಲ್ಲಟಕ್ಕೆ ನಾಂದಿ ಹಾಡಿದ ‘ಭಾಗ್ಯ’

ರಾಜ್ಯದಲ್ಲಿ ಮಹಿಳೆಯರಿಗೆ ‘ಶಕ್ತಿ ಯೋಜನೆ’ ಅನುಷ್ಠಾನ ನಾವು ತಿಳಿದುಕೊಂಡದ್ದಕ್ಕಿಂತ ದೊಡ್ಡಮಟ್ಟದಲ್ಲಿ ಪರಿಣಾಮವನ್ನು ಬೀರಿದೆ. ಉಚಿತ ಸಾರಿಗೆ ವ್ಯವಸ್ಥೆ ಮಹಿಳೆಯನ್ನು ನಿರ್ಬಂಧದಿಂದ ಬಿಡುಗಡೆಗೊಳಿಸಿದೆ. ಇದನ್ನು ಯಾವುದೇ ರಾಜಕೀಯ ದೃಷ್ಟಿಕೋನದಿಂದ ಹೇಳುತ್ತಿಲ್ಲ. ಸಾಮಾಜಿಕ ಸಂಚಲನವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಹೇಳುತ್ತಿದ್ದೇನೆ. ಎಷ್ಟೋ ವರ್ಷಗಳ ಹಿಂದೆ ಇಂತಹದ್ದೊಂದು ಆಗಬೇಕಿತ್ತು ಎಂದೂ ಅನಿಸಿದೆ. ಹಳ್ಳಿಯಲ್ಲಿ ಮಹಿಳೆಯೊಬ್ಬಳು ತನ್ನ ತವರಿಗೆ ಹೋಗಿ ಬರಲು ಕಾಯಬೇಕಿತ್ತು. ಅದಕ್ಕೆ ಹಣದ ಅಗತ್ಯ ಇರುತ್ತಿತ್ತು. ಈಗ ಎಲ್ಲಿಗಾದರೂ ಹೋಗಬಹುದು. ಕೂಲಿಕಾರ್ಮಿಕರು, ಬಡವರು, ಗ್ರಾಮೀಣ ಪ್ರದೇಶದ ಜನ ನಿಟ್ಟುಸಿರುಬಿಡುವಂತೆ ಆಗಿದೆ.

ಎಷ್ಟೇ ಲೇವಡಿ, ಹಾಸ್ಯ ಮಾಡಿದರೂ ಅದು ಮೂಡಿಸಿರುವ ಸಾಮಾಜಿಕ ಜಾಗೃತಿ ಅಮೋಘ. ಅರೇ, ಇಷ್ಟು ದಿನ ಹೀಗೆ ಸುಮ್ಮನೆ ಕೂತಿದ್ದೆವಾ ಎಂದು ಮಹಿಳೆಯರು ಅನ್ನುವಂತೆ ಆಗಿದೆ. ಮುಂದೆ ದುಡ್ಡು ಕೊಡಬೇಕು ಎಂದರೂ ಓಡಾಡುವುದನ್ನು ಅವರು ನಿಲ್ಲಿಸುವುದಿಲ್ಲ. ಏಕೆಂದರೆ ಅವರೀಗ ಬಂಧಮುಕ್ತರಾಗಿದ್ದಾರೆ. ಚಲನೆಯ ರುಚಿ ಸಿಕ್ಕಿದೆ. ಹಾಗಾಗಿ ಸಾಮಾಜಿಕವಾಗಿ ದೊಡ್ಡ ಬದಲಾವಣೆ ಅಂತ ಅಂದುಕೊಂಡಿದ್ದೇನೆ.

ಆರಂಭದಲ್ಲಿ ನಾನೂ ಹಾಸ್ಯದ ದೃಷ್ಟಿಯಿಂದ ನೋಡಿದ್ದೆ. ಈಗ ಅದರ ಮಹತ್ವ ಏನು ಅನ್ನುವುದು ಗೊತ್ತಾಗಿದೆ. ದೊಡ್ಡ ಮಟ್ಟದ ಪಲ್ಲಟಕ್ಕೆ ‘ಶಕ್ತಿ’ ನಾಂದಿ ಹಾಡಿದೆ. ಇನ್ನು ಮುಂದೆ ಮಹಿಳೆಯರನ್ನು ತಿರಸ್ಕಾರ ಭಾವದಿಂದ ನೋಡಲು ಸಾಧ್ಯವಿಲ್ಲ. ಅವರನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಅವರಿಗೆ ಪ್ರಾಶಸ್ತ್ಯ ನೀಡಬೇಕಾಗುತ್ತದೆ. ಸಾಮಾಜಿಕ ಬದಲಾವಣೆ ಬೇಗ ಕಣ್ಣಿಗೆ ಕಾಣುವುದಿಲ್ಲ ಎನ್ನುತ್ತಾರೆ. ಆದರೆ ಇದು ಥಟ್ ಅಂತ ಕಣ್ಣಿಗೆ ಕಾಣುವ ಅಸಾಮಾನ್ಯ ಪಲ್ಲಟ.

**–ಎಂ.ಜಿ. ಹೆಗಡೆ, ಶಿಕ್ಷಣ ತಜ್ಞ**